ಕರ್ನಾಟಕದಲ್ಲಿ ಸುಮಾರು 5 ಸಕ್ಕರೆ ಕಾರ್ಖಾನೆಗಳು ಇಥೆನಾಲ್ ಉತ್ಪಾದನೆಗೆ ಮುಂದೆ ಬಂದಿವೆ. ಈಗಾಗಲೇ ಪ್ರಾಥಮಿಕ ಹಂತದ ಪ್ರಕ್ರಿಯೆಗಳು ಪ್ರಾರಂಭವಾಗಿದ್ದು ಮುಂದಿನ ಎರಡು ಅಥವಾ ಮೂರು ವರ್ಷಗಳ ಅವಧಿಯಲ್ಲಿ ಈ ಕಾರ್ಖಾನೆಗಳು ಉತ್ಪಾದನೆ ಪ್ರಾರಂಭಿಸುವ ನಿರೀಕ್ಷೆ ಇದೆ. ಇದಕ್ಕಾಗಿ ಕೇಂದ್ರ ಸರ್ಕಾರವು ಸಕ್ಕರೆ ಅಭಿವೃದ್ಧಿ ನಿಧಿಯಿಂದ ಸಾಲದ ವ್ಯವಸ್ಥೆ ಮಾಡಲು ಮುಂದೆ ಬಂದಿದೆ. ಅದೇ ರೀತಿ ಪೆಟ್ರೋಲ್: ಡೀಸೆಲ್ ಜೊತೆ ಶೇಕಡ 5ರ ಪ್ರಮಾಣದಲ್ಲಿ ಬೆರೆಸಿ ಮಾರಾಟ ಮಾಡುವ ಇಂಧನ ಕಂಪನಿಗಳಿಗೆ ಉತ್ತೇಜನ ನೀಡಲು ತೆರಿಗೆ ರಿಯಾಯಿತಿ ನೀಡಲು ಕೂಡ ಕೇಂದ್ರ ನಿರ್ಧರಿಸಿದೆ. ಅದರಂತೆ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಇಥೆನಾಲ್ ಘಟಕ ಸ್ಥಾಪಿಸಲು ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ನಿಯಮಗಳಲ್ಲಿ ತಿದ್ದುಪಡಿಗಳನ್ನು ತಂದಿರುತ್ತದೆ.

ಇ) ರಾಜ್ಯ ಸರ್ಕಾರದಿಂದಲೂ ಕೂಡ ಈಗಾಗಲೇ ಡಿಸ್ಟಿಲರಿ ಘಟಕ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಅವುಗಳು ಕೋರಿದಲ್ಲಿ, ಇಥೆನಾಲ್ ಘಟಕ ಪ್ರಾರಂಭಿಸಲು ಅನುಮತಿ ನೀಡಲು ಕ್ರಮ ತೆಗೆದುಕೊಳ್ಳಲಾಗುತ್ತದೆ. ಇಥೆನಾಲ್‌ನ್ನು ಪೆಟ್ರೋಲ್‌ನಲ್ಲಿ ಮಿಶ್ರಣ ಮಾಡುವ ಬಳಕೆ ಬಿಟ್ಟು ಬೇರೆ ರೀತಿಯ ವಾಣಿಜ್ಯ ಬಳಕೆಗೆ ಈಗ ಅವಕಾಶವಿಲ್ಲ.

ರೇಷ್ಮೆ ಬೆಲೆ ಕುಸಿತ

1291(1737) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರೇಷ್ಮೆ ಬೆಲೆ ಕುಸಿತದಿಂದಾಗಿ ರೇಷ್ಮೆ ಕೃಷಿಯನ್ನು ಕೃಷಿಕರು ಕೈಬಿಡುವ ಪರಿಸ್ಥಿತಿಯು ತಲೆದೋರಿರುವುದನ್ನು ಸರ್ಕಾರವು ಗಮನಿಸಿದೆಯೆ?

ಆ) ರೇಷ್ಮೆ ಬೆಲೆ ಕುಸಿತವನ್ನು ತಡೆಗಟ್ಟಲು ಸರ್ಕಾರವು ಮಾರ್ಗೋಪಾಯಗಳನ್ನು ಆಲೋಚಿಸಿದೆಯೆ? (ವಿವರ ನೀಡುವುದು)

ಇ) ಕೃಷಿಕರಿಂದ ರಾಜ್ಯದಲ್ಲಿ ರೇಷ್ಮೆಯನ್ನು ಬೆಂಬಲ ಬೆಲೆ ನೀಡಿ ಕೊಳ್ಳಲಾಗಿದೆಯೆ?

ಈ) ಹಾಗಿದ್ದಲ್ಲಿ ಇದರ ಬಗ್ಗೆ ಮಾಹಿತಿ ನೀಡುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು):

ಅ) ಹಿಂದಿನ ವರ್ಷಕ್ಕೆ ಹೋಲಿಸಿದಾಗ ರೇಷ್ಮೆ ಗೂಡಿನ ದರ ಕಡಿಮೆಯಾಗಿದೆ.

ಆ) ಹೌದು, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ಒತ್ತಾಯಿಸಲಾಗಿದೆ.

1.1. ರೇಷ್ಮೆ ಆಮದನ್ನು ನಿಯಂತ್ರಿಸುವುದು.

2. ಆಮದು ಸುಂಕವನ್ನು ಹೆಚ್ಚಿಸುವುದು.

3. ಮಾರುಕಟ್ಟೆ ಪ್ರವೇಶಿಸಿ ರೇಷ್ಮೆಗೂಡು:ಕಚ್ಚಾ ರೇಷ್ಮೆ ಖರೀದಿಸಲು ಅನುಕೂಲವಾಗುವಂತೆ ಕೇಂದ್ರ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ ಮತ್ತು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಹಣ ಒದಗಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

4. ಅರ್ಹ ರಫ್ತುದಾರರಿಗೆ ಮಾತ್ರ ರೇಷ್ಮೆ ಆಮದಿಗೆ ಅವಕಾಶ ನೀಡುವುದು.

5. ನೇಪಾಳ ಹಾಗೂ ಬಾಂಗ್ಲದೇಶಗಳ ಗಡಿ ಮೂಲಕ ಚೀನಾ ರೇಷ್ಮೆ ಭಾರತದೊಳಕ್ಕೆ ಕಳ್ಳ ಸಾಗಣೆಯಾಗುವುದನ್ನು ತಪ್ಪಿಸುವುದು.

6. ಹಾಲಿ ಕಸ್ಟಂಮ್ಸ್ ಇಲಾಖೆಯ ಮೂಲಕ ವಿತರಣೆಯಾಗುತ್ತಿರುವ ರೇಷ್ಮೆಯನ್ನು, ರೇಷ್ಮೆ ವಿನಿಮಯ ಕೇಂದ್ರ ಅಥವಾ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯಂತಹ ಸರ್ಕಾರಿ ಸಂಸ್ಥೆಗಳ ಮೂಲಕ ವಿತರಿಸುವುದು.

7. ಕಾಯಿದೆ ಜಾರಿ ವಿಭಾಗವನ್ನು ಬಲಪಡಿಸಿ, ಅನಧಿಕೃತ ವಹಿವಾಟು ನಿಯಂತ್ರಿಸುವುದು.

2. ಕೆಎಸ್ಎಂಡಿ ಮತ್ತು ಕೆಎಸ್ಐಸಿ ಮುಖಾಂತರ ಮಾರುಕಟ್ಟೆಯಲ್ಲಿ ಪ್ರವೇಶಿಸಿ ಸೂಕ್ತ ಬೆಲೆ ಕೊಡಿಸಲಿಕ್ಕೆ ಕ್ರಮ ಕೈಗೊಳ್ಳುವುದರ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಇ. ಇಲ್ಲ

ಈ. ಕಚ್ಚಾ ರೇಷ್ಮೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ತಜ್ಞರ ಸಮಿತಿ ರಚನೆಯಾಗಿದ್ದು, ಸಮಿತಿಯ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ.

ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಕುರಿತು

1292(1738) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆ ಕಳೆದ ಮೂರು ವರ್ಷಗಳಿಂದ ಅರೆದಿರುವ ಕಬ್ಬಿನ ಪ್ರಮಾಣವೆಷ್ಟು?

ಆ) ಸದರಿ ಕಾರ್ಖಾನೆಯು ಕಳೆದ ಮೂರು ವರ್ಷಗಳಿಂದ, ಗಳಿಸಿರುವ ಲಾಭ ಅಥವಾ ಅನುಭವಿಸಿರುವ ನಷ್ಟದ ವಿವರಗಳೇನು?

ಇ) ಪಾಂಡವಪುರ ಸಹಕಾರ ಕಾರ್ಖಾನೆ, ರೈತರಿಗೆ ಕಬ್ಬಿನ ಹಣ ಪಾವತಿ ಮಾಡಲಾಗದ ಸ್ಥಿತಿಗೆ ಹಾಗೂ ಕಾರ್ಮಿಕರಿಗೆ ನಿಗದಿತವಾಗಿ ವೇತನ ಪಾವತಿ ಮಾಡದ ಪರಿಸ್ಥಿತಿಗೆ ಬಂದು ತಲುಪಿರಲು ಕಾರಣಗಳೇನು?

ಈ) ಈ ಸಹಕಾರ ಸಕ್ಕರೆ ಕಾರ್ಖಾನೆ ಸಂಕಷ್ಟ ಪರಿಸ್ಥಿತಿಯಲ್ಲ ನೆರವಾಗಲು ಸರಕಾರ ಕ್ರಮ ಕೈಗೊಂಡಿದೆಯೆ: (ವಿವರ ನೀಡುವುದು)

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) ಪಾಂಡವಪುರ ಸಹಕಾರ ಸಕ್ಕರೆ ಕಾರ್ಖಾನೆಯು ಕಳೆದ 3 ವರ್ಷಗಳಿಂದ ಅರೆದಿರುವ ಕಬ್ಬಿನ ಪ್ರಮಾಣ ಈ ಕೆಳಕಂಡಂತಿದೆ.

ಹಂಗಾಮು ವರ್ಷ	ಅರೆದ ಕಬ್ಬಿನ ಪ್ರಮಾಣ(ಟನ್‌ಗಳಲ್ಲಿ)
1999-2000	3,31,336
2000-2001	3,39,849
2001-2002	1,55,721

ಸದರಿ ಕಾರ್ಖಾನೆಯು ಕಳೆದ 3 ವರ್ಷಗಳಿಂದ ನಷ್ಟ ಅನುಭವಿಸುತ್ತಿದ್ದು, ಅವುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

	ಲಕ್ಷ ರೂ.ಗಳಲ್ಲಿ
1998-99	2,698.94
1999-2000	1,838.23
2000-2001	1,626.06